# ನವಿಲುಗನ್ನಡಿ




ಆಕರ್ಷಕ ಮುಖಪುಟದ ನವೆಂಬರ್ ಸಂಚಿಕೆ ಮನಸೆಳೆಯಿತು. ಕತೆಗಳು ಒಂದಕ್ಕಿಂತ ಒಂದು ಚೆನ್ನಾಗಿದ್ದವು. 'ನವಿಲುಗರಿ'ಯಲ್ಲಿ ಪ್ರಕಟವಾದ ಹಾ.ಮಾ. ನಾಯಕರ 'ಕಾಲು ಶತಮಾನದ ಕರ್ನಾಟಕ: ದೇವರಿಲ್ಲದ ಗುಡಿ' ಲೇಖನ 'ಮಯೂರ'ದ ಓದುಗರಿಗೆ ಸಮಯೋಚಿತ ಕೊಡುಗೆ.

**ಮೋಹನ್ ರೈ, ಮಂಗಳೂರು**

ಲೇಖನ 'ದೇವರಿಲ್ಲದ ಗುಡಿ' 35 ವರ್ಷದ ನಂತರವೂ ಅರ್ಥಪೂರ್ಣವಾಗಿದೆ. ಲೇಖನ ವೈಚಾರಿಕೆತೆಯಿಂದ ಕೂಡಿದೆ. ಎಂ.ಆರ್. ಮಂದಾರವಲ್ಲಿ ಅವರ ಕತೆ 'ಬಂಗಾರ ಮತ್ತು ರುದ್ರಾಕ್ಷಿ' ನನ್ನನ್ನು ಭಾವುಕಳನ್ನಾಗಿಸಿತು.

**ನೀಲಮ್ಮ ಕುಮಾರಪ್ಪ, ಲಿಂಗಸೂಗೂರು**

ಪತ್ತೇದಾರಿ ಕತೆ 'ಮಿಸ್ಸಿಂಗ್‌ಲಿಂಕ್' (ವಾಸುದೇವ ಮೂರ್ತಿ ಪಿ.) ಚೆನ್ನಾಗಿ ಮೂಡಿಬಂದಿದೆ. ಲೇಖಕರು ಪೊಲೀಸ್ ಇಲಾಖೆಯನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿ ಕತೆಯನ್ನು ಬರೆದಿದ್ದಾರೆ ಎಂಬುದು ಅದೇ ಇಲಾಖೆಯಲ್ಲಿ ಕೆಲಸ ಮಾಡಿ ನಿವೃತ್ತನಾಗಿರುವ ನನ್ನ ಭಾವನೆ. ಒಂದು ದೊಡ್ಡ ಹಗರಣವನ್ನು ಮುಚ್ಚಿಹಾಕಲು ಸಣ್ಣ ಪ್ರಕರಣ ಒಂದನ್ನು ಸೃಷ್ಟಿಸಿ ತಪ್ಪಿಸಿಕೊಳ್ಳುವ ಭ್ರಷ್ಟ ವ್ಯವಸ್ಥೆಯನ್ನು ತೋರಿಸುವ ಕೈಗನ್ನಡಿ ಈ ಕತೆ.

**ಜಯಣ್ಣ ಕೆ.**

'ಬೀದರ್ ಭಾಷೆಯ ಸೊಗಡು' ಪರಿಚಯಿಸಿದ ಎಸ್. ರಶ್ಮಿ ಅವರ ಲೇಖನ ಓದಿ ಸಂತೋಷವಾಯಿತು. ಬೀದರ್ ಭಾಷೆಯ ಸೊಗಸನ್ನು ಸವಿದವರಲ್ಲಿ ನಾನೂ ಒಬ್ಬಳು. ನಾನು ಅಲ್ಲಿಗೆ (ಸ್ವ–ಇಚ್ಛೆಯಿಂದ) ವೈದ್ಯೆಯಾಗಿ ಹೋದಾಗ, ಗರ್ಭಿಣಿಯರು ಹೇಳುತ್ತಿದ್ದ 'ಕೂಸು ತಿರುಗಲ್ ಹೊಂಟದ' ಕೇಳಿ ಮಗು ತಿರುಗುತ್ತಿದೆಯೋ, ತಿರುಗುತ್ತಿಲ್ಲವೋ ಎಂದು ತಿಳಿಯದೆ ಪರದಾಡುತ್ತಿದ್ದೆ!

**ಡಾ. ಲೀಲಾವತಿ ದೇವದಾಸ್, ಬೆಂಗಳೂರು**

ಎಸ್.ಜಿ. ಶಿವಶಂಕರ್ ಅವರ ಕತೆ 'ಬಣ್ಣದ ಚಿಟ್ಟೆ' ಅತ್ಯಂತ ರೋಚಕವಾಗಿತ್ತು. ಈ ಕತೆಯಲ್ಲಿ ರೊಬೊ ಒಂದು ಸುಂದರ ಯುವತಿಯಾಗುವ ಕಲ್ಪನೆಯೇ ಹೊಸದಾಗಿದೆ.

**ಅರುಣಕುಮಾರ್ ಜಿ.ಎಸ್., ಹೊಸಪೇಟೆ**

'ಚಿಣ್ಣರ ಚಾವಡಿ'ಯಲ್ಲಿ ಪ್ರಕಟವಾದ ಹತ್ತೊಕ್ಕಲು ಶಿವರಾಮ ಭಟ್ ಅವರ ಮಕ್ಕಳ ಕತೆ 'ಶ್ರೇಷ್ಠ ಇಲಿ' ಮುದಗೊಳಿಸಿತು.

**ಮಾನಸ ಭಟ್, ಪುತ್ತೂರು**

'ಬಂಗಾರ ಮತ್ತು ರುದ್ರಾಕ್ಷಿ' ಕತೆಯ ಶೇಷಜ್ಜಿಯ ಸ್ಥಿತಪ್ರಜ್ಞತೆ ಎಲ್ಲರಿಗೂ ಮಾದರಿ. 'ಬರ್ಗರ್' (ದಾಮೋದರ ಮಾವಜೊ) ಕತೆಯ ಎಲ್ಲ ಪಾತ್ರಗಳು ಜೀವಂತವಾಗಿವೆ. ಇದು ಸಕಾಲಿಕ ಕತೆ.

**ಶಮಿತಾ ಕುಸನೂರ, ಧಾರವಾಡ**